15

11

V.

ಕರ್ನಾಟಕ ಸರಕಾರ

ದೂರವಾಣಿ:08200820-2524925(ಕ),
2532700(ಮ),
2524926(ಫ್ಯಾ), ಇಮೈಲ್:
dcudp@dataone.in.
ವೆಬ್ ಸೈಟ್: dcofficeudupi.org

## ಜಿಲ್ಲಾಧಿಕಾರಿಯವರ ಕಛೇರಿ, ಉಡುಪಿ ಜಿಲ್ಲೆ, ಉಡುಪಿ – 576 101.

ಸಿಎಲ್/ಸಿಆರ್/44/2010-11

ದಿನಾಂಕ: 29/5/2010

ಉಪ ವಿಭಾಗೀಯ ಇಂಜಿನಿಯರ್,
ಬಿಎಸ್‌ಎನ್‌ಎಲ್,
ಉಡುಪಿ.

ಮಾನ್ಯರೆ.

ವಿಷಯ: ಉಡುಪಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪ್ರಕೃತಿ ವಿಕೋಪದ ಸಲುವಾಗಿ ಸ್ಥಾಪಿಸಲಾಗಿರುವ ಕಂಟ್ರೋಲ್ ರೂಂ ಗೆ ಅಳವಡಿಸಿರುವ ದೂರವಾಣಿ ಸಂಖ್ಯೆ 2531602 ನ್ನು **Toll Free**-1077 ದೂರವಾಣಿಯಾಗಿ ಪರಿವರ್ತಿಸಿ ಕೊಡುವ ಷ ಬಗ್ಗೆ.

******

ವಿಷಯಕ್ಕೆ ಸಂಬಂಧಿಸಿದಂತೆ ಉಡುಪಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪ್ರಕೃತಿ ವಿಕೋಪದ ಮಾಹಿತಿಯನ್ನು ಪಡೆಯುವ ಸಲುವಾಗಿ ಸ್ಥಾಪಿಸಲಾಗಿರುವ ಕಂಟ್ರೋಲ್ ರೂಂ ನಲ್ಲಿ ಹಾಲಿ ದೂರವಾಣಿ 2531602 ಕೆಲಸ ನಿರ್ವಹಿಸುತ್ತಿದ್ದು, ಈ ದೂರವಾಣಿಯನ್ನು **Toll Free** -1077 ದೂರವಾಣಿಯಾಗಿ ಈ ಕೂಡಲೇ ಪರಿವರ್ತಿಸಿಕೊಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿ,
ಉಡುಪಿ ಜಿಲ್ಲೆ, ಉಡುಪಿ.

12            8.9

ಕರ್ನಾಟಕ ಸರ್ಕಾರ
ದೂರವಾಣಿ:0820-2524425(ಕ), 25[illegible]00(ಮ), 2524926(ಫ್ಯಾ), ಇಮ್ಮೇಲ್: dcudpi[illegible].in.
ವೆಬ್ ಸೈಟ್: dcofficeudupi.org

## ಜಿಲ್ಲಾಧಿಕಾರಿಯವರ ಕಛೇರಿ, ಉಡುಪಿ ಜಿಲ್ಲೆ, ಉಡುಪಿ 576 101.

ಸಿಎಎಲ್/ ಸಿಆರ್/1/2010-11 ವಿಪತ್ತು ನಿರ್ವಹಣೆ

ದಿನಾಂಕ: 26/11/2010

ಅಧಿಕೃತ ಜ್ಞಾಪನ

ವಿಷಯ:- ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ: ಜಿಲ್ಲಾ ತಾಲೂಕು ವಿಪತ್ತು ನಿರ್ವಹಣಾ ಸಮಿತಿ ರಚನೆ-

ಉಲ್ಲೇಖ:-1) ಸರಕಾರದ ಅಧಿಸೂಚನೆ ಸಂಖ್ಯೆ: ಆರ್ ಡಿ/28 ಇಟಿಸಿ 06 ದಿನಾಂಕ: 16/5/2006

...

ಉಡುಪಿ ಜಿಲ್ಲೆಯಲ್ಲಿ ಪ್ರತಿ ವರ್ಷ ವಿಪರೀತ ಮಳೆಗಾಳಿಯಿಂದ . ನೆರೆ. ಸಮುದ್ರ ಕೊರೆತ.ಸಂಭವಿಸುತ್ತಿದ್ದು. ಅಪಾರ ಹಾನಿ ಸಂಭವಿಸುತ್ತಿದೆ. ಮಾನವ ಜೀವ ಹಾನಿ. ಜಾನುವಾರು ಜೀವ ಹಾನಿ. ಸಾರ್ವಜನಿಕ ಆಸ್ತಿ ಪಾಸ್ತಿ ಹಾನಿ. ಬೆಳೆಗಳಿಗೆ ಹಾನಿ. ವಾಸದ ಮನೆಗಳಿಗೆ ಹಾನಿ. ನರೆಯಿಂದ ಜಿಲ್ಲೆಯ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿ ಜಲಾವೃತಗೊಳ್ಳಲಿದ್ದು. ಜನರಿಗೆ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಬೇಕಾಗಿದ್ದು. ಅಷ್ಟೇ ಅಲ್ಲದೆ. ವಿಪತ್ತುಗಳಾದ ಬೆಂಕಿ ಅನಾಹುತ. ಅಪಘಾತ. ಸಿಡಿಲು. ಇನ್ನಿತರ ಯಾವುದೇ ತರದ ಅವಘಡಗಳನ್ನು ಎದರಿಸಲು ಜಿಲ್ಲಾಡಳಿತ ಸಜ್ಜುಗೊಳಿಸುವ ನಿಟ್ಟಿನಲ್ಲಿ , ಇಂತಹ ಪ್ರಾಕೃತಿಕ ವಿಕೋಪಗಳನ್ನು ಸಮರ್ಥವಾಗಿ ನಿಯಂತ್ರಿಸಲು ಅನುವಾಗುವಂತೆ . ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿಯನ್ನು ರಚನ ಮಾಡುವುದು ಅವಶ್ಯವೆಂದು ಮನಗಂಡು ವಿಪತ್ತು ನಿರ್ವಹಣಾ ಕಾಯ್ದೆ ಕಲಂ 28 ರಡಿ ಈ ಕೆಳಗಿನಂತೆ ಸದಸ್ಯರುಗಳನ್ನು ಒಳಗೊಂಡಂತೆ ಸಮಿತಿಯನ್ನು ರಚನೆ ಮಾಡಿದೆ.

ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ:

| | | |
|---|---|---|
| 1. | ಜಿಲ್ಲಾಧಿಕಾರಿ. ಉಡುಪಿ | ಅಧ್ಯಕ್ಷರು |
| 2. | ಅಪರ ಜಿಲ್ಲಾಧಿಕಾರಿ. ಉಡುಪಿ ಜಿಲ್ಲೆ. ಉಡುಪಿ | ಸದಸ್ಯ ಕಾರ್ಯದರ್ಶಿ |
| 3. | ಮುಖ್ಯ ಕಾರ್ಯ ನಿರ್ವಹಣಾಧಿಕಾರಿ. ಜಿಲ್ಲಾ ಪಂಚಾಯತ್ ಉಡುಪಿ | ಸದಸ್ಯರು |
| 4. | ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ –ಉಡುಪಿ | ಸದಸ್ಯರು |
| 5. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ. ಉಡುಪಿ | ಸದಸ್ಯರು |
| 6. | ಕಾರ್ಯ ಪಾಲಕ ಇಂಜಿನಿಯರರು. ಜಿಲ್ಲಾ ಪಂ. ಇಂ.ವಿಭಾಗ ಉಡುಪಿ | ಸದಸ್ಯರು |
| 7. | ಜಂಟಿ ಕೃಷಿ ನಿರ್ದೇಶಕರು. ಉಡುಪಿ | ಸದಸ್ಯರು |
| 8. | ಕಾರ್ಯ ನಿರ್ವಾಹಕ ಇಂಜಿನಿಯರರು. ಲೋಕೋಪಯೋಗಿ ಇಲಾಖೆ. ಉಡುಪಿ | ಸದಸ್ಯರು |
| 9. | ಕಾರ್ಯ ನಿರ್ವಾಹಕ ಇಂಜಿನಿಯರರು. ಮೆಸ್ಕಾಂ. ಉಡುಪಿ | ಸದಸ್ಯರು |
| 10. | ಉಪ ಅರಣ್ಯ ಸಂರಕ್ಷಣಾಧಿಕಾರಿ. ಕುಂದಾಪುರ ಅರಣ್ಯ ವಿಭಾಗ | ಸದಸ್ಯರು |

| | | |
|---|---|---|
| 6 | ತಾಲೂಕು ಅಗ್ನಿ ಶಾಮಕ ಅಧಿಕಾರಿ | ಸದಸ್ಯರು |
| 7. | ತಾಲೂಕು ಮೆಡಿಕಲ್ ಆಫಿಸರ್. | ಸದಸ್ಯರು |
| 8. | ಸಹಾಯಕ ಅರಣ್ಯ ಸಂರಕ್ಷಕಾಧಿಕಾರಿ, | ಸದಸ್ಯರು. |
| 9. | ಸಹಾಯಕ ಕೃಷಿ ನಿರ್ದೇಶಕರು. | ಸದಸ್ಯರು, |
| 10 | ಸಹಾಯಕ ತೋಟಗಾರಿಕೆ ನಿರ್ದೇಶಕರು. | ಸದಸ್ಯರು |
| 11 | ಜಿಲ್ಲಾ ಮಟ್ಟದಿಂದ ನೇಮಕಗೊಂಡ ತಾಲ್ಲೂಕು ನೋಡಲ್ ಅಧಿಕಾರಿಗಳು | ಸದಸ್ಯರು, |
| 12. | ಪೌರಾಯುಕ್ತರು/ಮುಖ್ಯಾಧಿಕಾರಿಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ | ಸದಸ್ಯರು |
| 13 | ತಾಲೂಕು ಸಮಾಜ ಕಲ್ಯಾಣಾಧಿಕಾರಿ | ಸದಸ್ಯರು |
| 14 | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 15. | ತಾಲೂಕು ಪಶು ವೈದ್ಯಾಧಿಕಾರಿ | ಸದಸ್ಯರು |
| 16 | ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ | ಸದಸ್ಯರು |

1. ಮೇಲ್ಕಂಡ ಸಮಿತಿಗಳು ಕೂಡಲೇ ಸಭೆ ಸೇರಿ ನೆರೆ, ವಿದ್ಯುತ್ ಅವಘಡ, ರಸ್ತೆ ಅಪಘಾತ, ಇತ್ಯಾದಿಗಳ ಬಗ್ಗೆ ಚರ್ಚಿಸಿ ಮುಂಜಾಗ್ರತ ಕ್ರಮ ಜರಗಿಸುವುದು.
2. ಜಿಲ್ಲಾಧಿಕಾರಿ/ಹಾಗೂ ತಹಶೀಲ್ದಾರರ ಕಛೇರಿಗಳಲ್ಲಿ ಸ್ಥಾಪಿಸಲಾಗಿರುವ ಕಂಟ್ರೋಲ್ ರೂಂಗಳಲ್ಲಿ ದಿನದ 24 ಗಂಟೆಗಳ ಕಾಲ ಸಿಬ್ಬಂದಿ ನೇಮಕ ಮಾಡಿ ಕಾರ್ಯ ನಿರ್ವಹಿಸಲು ಕ್ರಮ ಜರುಗಿಸತಕ್ಕದ್ದು.
3. ತಾಲ್ಲೂಕು ಸಮಿತಿ ಸದಸ್ಯರ ಹಾಗೂ ಕಂಟ್ರೋಲ್ ರೂಂನ ದೂರವಾಣಿ ಸಂಖ್ಯೆಯನ್ನು ಎಲ್ಲರಿಗೂ ನೀಡುವುದರ ಜೊತೆಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಜರುಗಿಸುವುದು.
4. ಜೀವ ರಕ್ಷಕ ಲಭ್ಯ ಸಾಮಾಗ್ರಿಗಳ ಪಟ್ಟಿ ತಯಾರಿಸಿಟ್ಟುಕೊಳ್ಳುವುದು
5. ಸಾರ್ವಜನಿಕ ದೂರು ಮಾಹಿತಿಗಳಿಗೂ ಕೂಡಲೇ ಸ್ಪಂದಿಸಿ ಅವಶ್ಯ ಕ್ರಮ ಜರುಗಿಸುವುದು.
6. ಜಿಲ್ಲಾಧಿಕಾರಿಗಳು ಕೇಳುವ ಅವಶ್ಯ ಮಾಹಿತಿ ವಿವರಗಳನ್ನು ಸಕಾಲದಲ್ಲಿ ಸಲ್ಲಿಸುವ ವ್ಯವಸ್ಥೆ ಮಾಡುವುದು
7. ವಿಪತ್ತು ನಿರ್ವಹಣೆಯ ತುರ್ತು/ ಪರಿಣಾಮಕಾರಿ ಕ್ರಮಕ್ಕಾಗಿ ನಿಮ್ಮ ವ್ಯಾಪ್ತಿಯಲ್ಲಿ ಅವಶ್ಯವಿರುವ ಯಾವುದೇ ಇಲಾಖೆಯ/ ಸಂಘ ಸಂಸ್ಥೆಯ ಸಹಕಾರವನ್ನು ಪಡೆದುಕೊಳ್ಳತಕ್ಕದ್ದು
8. ತಕ್ಷಣಕ್ಕೆ ಅನ್ವಯವಾಗುವಂತೆ ಈ ಆದೇಶವನ್ನು ಜಾರಿಗೊಳಿಸಿದೆ

( ಹೇಮಲತಾ ಪಿ.)
ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು
ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ
ಉಡುಪಿ ಜಿಲ್ಲೆ, ಉಡುಪಿ.